


# ಹಿಮನೆಲದಡಿ ಬೀಜಗಳ ಕಣಜ

**ಅಳಿವಿನಂಚಿನಲ್ಲಿರುವ ಬೆಳೆಗಳ ತಳಿ ಸಂರಕ್ಷಣೆ ಮಾತ್ರವಲ್ಲದೇ ಆಪತ್ತಿನ ಸಂದರ್ಭ ಆಹಾರ ಬೆಳೆಗಳ ಸಂಪೂರ್ಣ ನಾಶ ತಡೆಯುವ ದೂರಾಲೋಚನೆಯಿಂದ ಹುಟ್ಟಿಕೊಂಡ ಬಹುದೊಡ್ಡ ಬೀಜ ಸಂರಕ್ಷಣಾ ಕೇಂದ್ರ, ಸ್ವಾಲ್ಬಾರ್ಡ್ ಎಂಬ ಹಿಮ ನೆಲದಡಿಯಲ್ಲಿದೆ.**

**■ ಸುಚೇತಾ ಕೆ. ನಾರಾಯಣ್**

ಸ್ವಾಲ್ಬಾರ್ಡ್ ನಾರ್ವೆ ದೇಶಕ್ಕೆ ಸೇರಿದ, ಉತ್ತರ ಧ್ರುವಕ್ಕೆ ಸಮೀಪದಲ್ಲಿರುವ ದ್ವೀಪ ಸಮುಚ್ಛಯ. ಇದು ಆರ್ಕ್ಟಿಕ್ ವೃತ್ತದ ಪರಿಧಿಯಾಚೆ ಇರುವುದರಿಂದ ಬೇಸಿಗೆಯಲ್ಲಿ ಸುಮಾರು 99 ದಿನಗಳ ಕಾಲ ಇಲ್ಲಿ ಸೂರ್ಯ ಮುಳುಗುವುದೇ ಇಲ್ಲ. ಈ ವಿದ್ಯಮಾನವನ್ನು 'ಮಿಡ್‌ನೈಟ್ ಸನ್' ಎಂದು ಕರೆಯಲಾಗುತ್ತದೆ.

ಹಾಗೆಯೇ 'ಪೋಲಾರ್ ನೈಟ್' ಎಂದು ಕರೆಯಲಾಗುವ ಚಳಿಗಾಲದ 84 ಪೂರ್ಣ ಕತ್ತಲ ದಿನಗಳಲ್ಲಿ ಸೂರ್ಯನ ಬೆಳಕೇ ಕಾಣದು. ಇಲ್ಲಿನ ತಾಪಮಾನವು ಹೆಚ್ಚಿನ ದಿನಗಳಲ್ಲಿ ಶೂನ್ಯಕ್ಕಿಂತ ಕೆಳಗಿದ್ದು, ಎಲ್ಲೆಡೆ ಮಂಜಿನ ದಪ್ಪನೆಯ ಹೊದಿಕೆ ಹೊದೆಸಿದಂತೆ ಕಾಣುತ್ತದೆ. ನೀರ್ಗಲ್ಲುಗಳಿಂದ ತುಂಬಿದ ಹಿಮಚ್ಛಾದಿತ ಪ್ರದೇಶವಾದ್ದರಿಂದ ಹಿಮಕರಡಿಗಳು, ಹಿಮಸಾರಂಗಗಳು, ಹಿಮನರಿಗಳ ವಾಸಸ್ಥಾನವೂ ಇದಾಗಿದೆ.

ಆದರೆ ಇವೆಲ್ಲಕ್ಕಿಂತ ಹೆಚ್ಚಾಗಿ, ಸ್ವಾಲ್ಬಾರ್ಡ್ ಗುರುತಿಸಿಕೊಂಡಿರುವುದು ಮತ್ತೊಂದು ವಿಶಿಷ್ಟ ಕಾರಣಕ್ಕಾಗಿ. ಅದೇ 'ಜಾಗತಿಕ ಬೀಜ ಸಂರಕ್ಷಣಾ ಕೇಂದ್ರ'. ಆ ವಿಸ್ತಾರ ಮಹಾಸಾಗರದ ಮಧ್ಯದಲ್ಲೆಲ್ಲೋ ಇರುವ ಸ್ವಾಲ್ಬಾರ್ಡ್‌ನ ಸ್ಪಿಟ್ಸ್ ಬೆರ್ಯೆನ್ ದ್ವೀಪದಲ್ಲಿ ಹಿಮದಿಂದ ಆವೃತವಾದ ಬೆಟ್ಟಗಳ ಉದರದಲ್ಲಿ ಜಾಗತಿಕ ಬೀಜ ಸಂರಕ್ಷಣಾ ಕೇಂದ್ರ ಅಡಗಿ ಕುಳಿತಿದೆ.

ಇದೇನೆಂದು ಕೇಳುತ್ತೀರಾ? ಪ್ರಪಂಚದಾದ್ಯಂತ ಇರುವ ಆಹಾರ ಬೆಳೆಗಳ ಬೀಜಗಳನ್ನು ಸಂಗ್ರಹಿಸಿ ಇಡುವ ಇಲ್ಲಿನ ಒಂದು ವ್ಯವಸ್ಥೆ. ಭವಿಷ್ಯದಲ್ಲಿ ಪ್ರಕೃತಿ ವಿಕೋಪವೋ, ಕಾಯಿಲೆಯೋ, ಜಾಗತಿಕ ಯುದ್ಧಗಳೋ ಅಥವಾ ಇನ್ಯಾವುದಾದರೂ ಕಾರಣದಿಂದ ಆಹಾರ ಬೆಳೆಗಳು ನಾಶವಾಗುವ ಸಂದರ್ಭ ಒದಗಿದರೆ, ಆ ಬೆಳೆಗಳನ್ನು ಇಲ್ಲಿ ಸಂರಕ್ಷಿಸಿಟ್ಟ ಬೀಜಗಳ ಸಹಾಯದಿಂದ ಮತ್ತೆ ಬೆಳೆಸಬಹುದೆಂಬುದು ದೂರಾಲೋಚನೆ.

ಆಹಾರ ಬೆಳೆಗಳಲ್ಲಿ ಹಲವಷ್ಟು ವಿಧಗಳಿದ್ದರೂ ಕೆಲ ಬೆಳೆಗಳು, ಪ್ರಬೇಧಗಳು ಮಾತ್ರವೇ ಪ್ರಚಲಿತದಲ್ಲಿವೆ. ಹಿಂದೆ ಇದ್ದ ಬೆಳೆಗಳ ವೈವಿಧ್ಯ ಹಲವು ಕಾರಣಗಳಿಂದಾಗಿ ನಿಧಾನವಾಗಿ ನಶಿಸುತ್ತಿದೆ. ಹೀಗಾಗಿ ಅವುಗಳ ಸಂರಕ್ಷಣೆಗೆ ಇಂಥದ್ದೊಂದು ವ್ಯವಸ್ಥೆಯನ್ನು ಮಾಡಿಟ್ಟುಕೊಳ್ಳಲಾಗಿದೆ. ಬೆಟ್ಟದಡಿಯಲ್ಲಿ ಅಡಗಿರುವ ನೆಲಮಾಳಿಗೆಯೊಳಗೆ –18 ಡಿಗ್ರಿ ಉಷ್ಣತೆಯಲ್ಲಿ, ಅಳಿವಿನಂಚಿನಲ್ಲಿರುವ ತಳಿಗಳನ್ನು ಗುರುತಿಸಿ ಸಂರಕ್ಷಿಸುವ ವ್ಯವಸ್ಥೆಯನ್ನು 'ವಾಲ್ಟ್' ಎಂದು ಕರೆಯಲ್ಪಡುವ ಈ ಉಗ್ರಾಣದಲ್ಲಿ ಮಾಡಲಾಗಿದೆ.

ಬೀಜಗಳನ್ನು ಶೀತಲ ವಾತಾವರಣದಲ್ಲಿ ಸಂಗ್ರಹಿಸಿರುವುದರಿಂದ ಸಾವಿರಾರು ವರ್ಷಗಳವರೆಗೂ ಕೆಡದೇ ಉಳಿಯಬಲ್ಲವು. ಈಗಾಗಲೇ ಮಿಲಿಯನ್ ಗಟ್ಟಲೆ ಮಾದರಿಗಳು ಈ ಉಗ್ರಾಣದಲ್ಲಿ ಸುರಕ್ಷಿತವಾಗಿವೆ. ಇನ್ನೂ ಮಿಲಿಯನ್‌ಗಟ್ಟಲೆ ಮಾದರಿಗಳಿಗೆ ಸ್ಥಳಾವಕಾಶವಿದೆ. ಇಂತಹ ವ್ಯವಸ್ಥೆ ಪ್ರಪಂಚದ ಹಲವೆಡೆ ಇದ್ದರೂ ಸ್ವಾಲ್ಬಾರ್ಡ್‌ನಲ್ಲಿರುವುದು ಅತೀ ದೊಡ್ಡದು.

2008ರಲ್ಲಿ ಲೋಕಾರ್ಪಣೆಗೊಂಡ, ಈ ಬೀಜಗಳನ್ನು ಸಂರಕ್ಷಿಸುವ ವ್ಯವಸ್ಥೆ ನಾರ್ವೆ ದೇಶಕ್ಕೆ ಸೇರಿದೆ. ಸುಮಾರು 45 ಮಿಲಿಯನ್ ನಾರ್ವೇಜಿಯನ್ ಕ್ರೌನ್ಸ್ ವೆಚ್ಚದಲ್ಲಿ ನಿರ್ಮಿಸಲಾದ ಇದರ ಪೂರ್ತಿ ಖರ್ಚನ್ನು ನಾರ್ವೆ ದೇಶವೇ ಭರಿಸಿರುವುದು ವಿಶೇಷ. ಆದರೆ ಇದರ ನಿರ್ವಹಣೆಯನ್ನು ನಾರ್ವೇಜಿಯನ್ ಸರ್ಕಾರ, ಕ್ರಾಪ್ ಟ್ರಸ್ಟ್ ಹಾಗೂ ನೊರ್ಡ್ ಜೆನ್ ಎಂಬ ಸಂಸ್ಥೆಗಳೊಡಗೂಡಿ ನೋಡಿಕೊಳ್ಳುತ್ತಿದೆ.

ಭಾರತದಲ್ಲೂ ಸ್ಥಳೀಯ ಆಹಾರ ಧಾನ್ಯಗಳ ಬೀಜಗಳನ್ನು ಇದೇ ರೀತಿ ಸಂರಕ್ಷಿಸುವ ಕೇಂದ್ರ ಲಡಾಕ್‌ನ ಸುಮಾರು 17500 ಅಡಿ ಎತ್ತರದ ಪ್ರದೇಶದಲ್ಲಿರುವ ಚಾಂಗ್ ಲಾ ಪಾಸ್‌ನಲ್ಲಿದೆ. 2010ರಲ್ಲಿ ಇದನ್ನು ತೆರೆಯಲಾಗಿದ್ದು, ಸುಮಾರು 10,000 ಬೀಜಗಳನ್ನು ರಕ್ಷಿಸಿಡಲಾಗಿದೆ.

ಪ್ರತಿಕ್ರಿಯಿಸಿ: feedback@sudha.co.in